# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1355** |
| **ಸದಸ್ಯರ ಹೆಸರು** | : | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **19.03.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಪಶು ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯರುಗಳ ಮತ್ತು ಖಾಲಿ ಇರುವ ಪಶು ವೈದ್ಯರ ಹುದ್ದೆ ಎಷ್ಟು; ಮತ್ತು ಖಾಲಿ ಹುದ್ದೆಗಳು ಇರಲು ಕಾರಣಗಳೇನು; | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ **3,317** ಹುದ್ದೆಗಳಿದ್ದು ಅದರಲ್ಲಿ ಹಾಲಿ **2,173** ಪಶುವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, **1,144** ಹುದ್ದೆಗಳು ಖಾಲಿ ಇರುತ್ತವೆ.<br><br>ಸರ್ಕಾರವು ಕರ್ನಾಟಕ ಪಶುಪಾಲನಾ ಮತ್ತು ಪಶುವೈದ್ಯಕೀಯ (ಪಶುವೈದ್ಯಾಧಿಕಾರಿಗಳ ನೇಮಕಾತಿ) (ವಿಶೇಷ) ನಿಯಮ 2022 ನಿಯಮವನ್ನು ದಿನಾಂಕ:05.02.2022 ರಂದು ಅಧಿಸೂಚನೆ ಮೂಲಕ ಜಾರಿಗೊಳಿಸಲಾಗಿತ್ತು.<br><br>400 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅಧಿಸೂಚನೆಯನ್ನು ದಿನಾಂಕ: 08-03-2022 ರಂದು ಹೊರಡಿಸಲಾಗಿತ್ತು.<br><br>400 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ (High Court) ಪ್ರಕರಣ ಸಂಖ್ಯೆ: WP 6662/2022 ಹಾಗೂ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 1536-1537/2022ರಲ್ಲಿ, ಡಾ.ಶಶಿಕುಮಾರ ಮತ್ತು ಇತರರು, ವಿಶೇಷ ನಿಯಮದಡಿ ನೇಮಕಾತಿ ಮಾಡುವುದನ್ನು ಪ್ರಶ್ನಿಸಿದಲ್ಲದೆ ಕೆ.ಪಿ.ಎಸ್.ಸಿ. ಮೂಲಕ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಆಯ್ಕೆಗಾಗಿ ಮಾಡಲು ಪ್ರಕರಣ ದಾಖಲಿಸಿದ್ದರು.<br><br>ಮಾನ್ಯ ಉಚ್ಚ ನ್ಯಾಯಾಲಯವು, ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಗೆ ಅರ್ಜಿಯನ್ನು ವರ್ಗಾಯಿಸಿ ಅಂತಿಮ ನಿರ್ಣಯ ಕೈಗೊಳ್ಳಲು ಸೂಚಿಸಿದ ಆಧಾರದ ಮೇಲೆ |

| | | |
|---|---|---|
| | | ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ:15-02 2023 ರಂದು ವಿಶೇಷ ನೇರನೇಮಕಾತಿ ನಿಯಮ 2022ನ್ನು ವಜಾಗೊಳಿಸಿರುತ್ತದೆ.<br><br>ತದನಂತರ ಸರ್ಕಾರವು 400 ಪಶುವೈದ್ಯಾಧಿಕಾರಿ ಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಅನುಮತಿಸಿದ್ದು, ಅದರಂತೆ ಕೆ.ಪಿ.ಎಸ್.ಸಿ ಈಗಾಗಲೇ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ, ಸದರಿ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ:08.04.2025ರಿಂದ ದಿನಾಂಕ:09.04.2025 ರವರೆಗೆ ಪರೀಕ್ಷೆಗಳನ್ನು ನಡೆಸಲು ತಾತ್ಕಾಲಿಕ ದಿನಾಂಕಗಳನ್ನು ನಿಗದಿಪಡಿಸಿದೆ.<br><br>ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡುವವರೆಗೂ 400 ಪಶುವೈದ್ಯಾಧಿಕಾರಿ ಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದ್ದು, 360 ಪಶುವೈದ್ಯರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. |
| ಆ | ಪಶುಪಾಲಕ ಸಮುದಾಯ ಹೆಚ್ಚಿರುವ ಬೆಳಗಾವಿ ಜಿಲ್ಲೆ, ಖಾನಾಪೂರ ತಾಲ್ಲೂಕಿನ ಗೋಧೂಳಿಯ ಪಶು ಚಿಕಿತ್ಸಾಲಯದಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳು ಕೊರತೆ ಇದ್ದು, ದೂರದ ಹಲಸಿ ಪಶು ಚಿಕಿತ್ಸಾಲಯದ ಒಬ್ಬರು ಡೆಪ್ಯೂಟೇಷನ್ ಮೇಲೆ ಕೆಲಸ ಮಾಡುತ್ತಿರುವುದರಿಂದ ಸ್ಥಳೀಯ ಪಶುಪಾಲಕರಿಗೆ ಅನೇಕ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು) | ಗೋಧೋಳಿ ಪಶುಚಿಕಿತ್ಸಾಲಯಕ್ಕೆ ಪಶುವೈದ್ಯಾಧಿಕಾರಿ-1, ಪಶುವೈದ್ಯಕೀಯ ಪರೀಕ್ಷಕರು-1 ಮತ್ತು 02 ಡಿ ದರ್ಜೆ ಹುದ್ದೆಗಳು ಮಂಜೂರಾಗಿದ್ದು ಸದರಿ ಹುದ್ದೆಗಳು ಖಾಲಿ ಇರುತ್ತವೆ. ಗೋಧೋಳಿ ಪಶುಚಿಕಿತ್ಸಾ ಕೇಂದ್ರು ವ್ಯಾಪ್ತಿಯ ರೈತರ ಜಾನುವಾರುಗಳ ಚಿಕಿತ್ಸೆಗೆ ತೊಂದರೆಯಾಗದಂತೆ ಹಲಸಿ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರದ ಕಿರಿಯ ಪಶುವೈದ್ಯಕೀಯ ಪರೀಕ್ಷಕರನ್ನು ನಿಯೋಜಿಸಲಾಗಿದೆ.<br><br>ತುರ್ತು ಚಿಕಿತ್ಸೆಗಾಗಿ ತಾಲ್ಲೂಕಿನ ಪಶುಸಂಜೀವಿನಿ ಘಟಕದ ಮೂಲಕ ದಿನನಿತ್ಯ ಪಶುವೈದ್ಯಕೀಯ ಸೇವೆ ನೀಡಲಾಗುತ್ತಿದೆ. 2023-24ನೇ ಸಾಲಿನಲ್ಲಿ 518 ಹಾಗೂ 2024-25ನೇ ಸಾಲಿನಲ್ಲಿ 978 ಜಾನುವಾರುಗಳಿಗೆ ತುರ್ತು ಚಿಕಿತ್ಸೆಗಳನ್ನುನೀಡಲಾಗಿದೆ.<br><br>ತಾಲ್ಲೂಕಿನ ಸಂಚಾರಿ ಪಶುಚಿಕಿತ್ಸಾಲಯದ ಮುಖಾಂತರವು ಸಹ ರೈತರ ಜಾನುವಾರುಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ. |

| | | |
|---|---|---|
| ಇ | ಸದರಿ ಚಿಕಿತ್ಸಾಲಯಕ್ಕೆ ಪ್ರಥಮಾದ್ಯತೆಯ ಮೇರೆಗೆ ಪಶುವೈದ್ಯರು ಮತ್ತು ಸಿಬ್ಬಂದಿ ನೇಮಿಸಲು ಸರ್ಕಾರದ ಮುಂದಿನ ಕ್ರಮಗಳೇನು? | 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>700 'ಡಿ' ದರ್ಜೆ ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

**ಸಂಖ್ಯೆ:ಪಸಂಮೀ 88 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು